ದಿನಾಂಕ: 11.02.2021 ರಂದು ಬೆಳಗ್ಗೆ 11.00 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 99 ರಲ್ಲಿ ಶ್ರೀ ಹೆಚ್.ವಿ. ಅಶ್ವತ್ಥ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಹೆಚ್.ವಿ. ಅಶ್ವತ್ಥ, ನೋಡಲ್ ಅಧಿಕಾರಿಗಳು
2. ಶ್ರೀ ಸೋಮಶೇಖರ್.ಜಿ.ಎಲ್, ಸಹಾಯಕ ಅಭಿಯಂತರರು,
3. ಶ್ರೀಮತಿ ರೇಶ್ಮ, ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ.
4. ಶ್ರೀ ಆನಂದ್, ಸಹಾಯಕ ಅಭಿಯಂತರರು, ಬೆಸ್ಕಾಂ,
5. ಶ್ರೀಮತಿ ಬೃಂದಾಗೌಡ, ಸಹಾಯಕ ಅಭಿಯಂತರರು, ವಾರ್ಡ್ ನಂ. 99
6. ಶ್ರೀ ಜಮೀಲ್, ಕಿರಿಯ ಅಭಿಯಂತರರು, ವಿದ್ಯುತ್ [ಪಶ್ಚಿಮ]
7. ಶ್ರೀ ಶಿವರಾಮಯ್ಯ, ಎ.ಎಸ್.ಐ. ರಾಜಾಜಿನಗರ
8. ಶ್ರೀ ಜಿ.ಸಿ. ಲೋಕೇಶ್, ಮೌಲ್ಯಮಾಪಕರು, ಕಂದಾಯ ಇಲಾಖೆ,
9. ಶ್ರೀ ರಮೇಶ್, ಪಶು ಸಂಗೋಪನ ಇಲಾಖೆ,
10. ಶ್ರೀ ಶ್ರೀನಾಥ್, ಅರಣ್ಯ ಇಲಾಖೆ
11. ಶ್ರೀ ನರಸಿಂಹ ಮೂರ್ತಿ ಕೆಲಸ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
12. ಶ್ರೀ ವೆಂಕಟೇಶ್, ಕಂದಾಯ ವಸೂಲಿಗಾರರು
13. ಶ್ರೀ ರಘು, ಕಿರಿಯ ಆರೋಗ್ಯ ಪರಿವೀಕ್ಷಕರು
14. ಶ್ರೀ ಡಿ. ಆನಂದ್. ಸದಸ್ಯರು
15. ಶ್ರೀ ಶ್ರೀನಿವಾಸ್.ಎನ್. ಸದಸ್ಯರು
16. ಶ್ರೀ ಉಮೇಶ್, ಸದಸ್ಯರು,
17. ಶ್ರೀ ಎನ್. ಮಂಜುನಾಥ್, ಸದಸ್ಯರು,
18. ಶ್ರೀ ಅಶೋಕ್‌ರಾವ್, ಸದಸ್ಯರು

ದಿನಾಂಕ: 11.02.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 99 ರಾಜಾಜಿನಗರದ ಡಾ: ಅಬ್ದುಲ್ ಕಲಾಂ, ಸಭಾಂಗಣದಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಹಿಂದಿನ ಸಭೆಯ ನಡವಳಿಯ ಪಟ್ಟಿಯನ್ನು ಸಭೆಗೆ ಮಂಡಿಸಲಾಯಿತು.
2. ಹಿಂದಿನ ಸಭೆಯಲ್ಲಿ ತೆಗೆದುಕೊಂಡ ನಡವಳಿಗಳ ಅನುಷ್ಠಾನದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
3. ಶ್ರೀ ಉಮೇಶ್, ಶ್ರೀ ಶ್ರೀನಿವಾಸ್, ಶ್ರೀ ಮಂಜುನಾಥ್, ವಾರ್ಡ್ ಕಮಿಟಿ ಸದಸ್ಯರುಗಳು ಮಾತನಾಡುತ್ತಾ, ಪಶ್ಚಿಮ ಕಾರ್ಡ್ ರಸ್ತೆಯ ಸರ್ವಿಸ್ ರಸ್ತೆಯಿಂದ ಮಂಜುನಾಥನಗರ 1ನೇ ಮುಖ್ಯ ರಸ್ತೆಗೆ ಸೇರುವ ರಸ್ತೆಯು ತುಂಬಾ ಕಿರಿದಾಗಿದ್ದು, ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುತ್ತದೆ. ಆದುದರಿಂದ ಸದರಿ ರಸ್ತೆಯಲ್ಲಿ ನವರಂಗ್ ಬ್ರಿಡ್ಜ್‌ನಿಂದ ಶಿವನಗರ ಸಿಗ್ನಲ್ ವರೆಗೆ ರಸ್ತೆ ಬದಿಯಲ್ಲಿರುವ ಟ್ರಾನ್ಸ್ ಫಾರ್ಮರ್‌ಗಳನ್ನು ಫ್ಲೈ ಓವರ್ ಕಟ್ಟಡದ ಪಕ್ಕಕ್ಕೆ ಸ್ಥಳಾಂತರಿಸಿದಲ್ಲಿ ರಸ್ತೆ ಅಗಲೀಕರಣ ಮಾಡಲು ಸಹಾಯವಾಗುವುದರಿಂದ ಸದರಿ ರಸ್ತೆಯಲ್ಲಿ ಬರುವ ಎಲ್ಲಾ ಟ್ರಾನ್ಸ್ ಫಾರ್ಮರ್‌ಗಳನ್ನು ಫ್ಲೈಓವರ್ ಕಟ್ಟಡದ ಪಕ್ಕಕ್ಕೆ ಸ್ಥಳಾಂತರಿಸಬೇಕೆಂದು ಸಭೆಯಲ್ಲಿ ಕೋರಿದರು. ಇದರ ಬಗ್ಗೆ ಉಳಿದ ವಾರ್ಡ್ ಕಮಿಟಿ ಸದಸ್ಯರು ಸಹ ಮಾತನಾಡುತ್ತಾ ಈಗಾಗಲೇ ಸದರಿ ರಸ್ತೆಯಲ್ಲಿ ಟ್ರಾನ್ಸ್ ಫಾರ್ಮರ್ ಸ್ಥಳಾಂತರಿಸುವ ಕಾರ್ಯವು ಪ್ರಗತಿಯಲ್ಲಿರುವುದರಿಂದ ಈ ರಸ್ತೆಯಲ್ಲಿ ಬರುವ ಎಲ್ಲಾ ಟ್ರಾನ್ಸ್ ಫಾರ್ಮರ್‌ಗಳನ್ನು ಸ್ಥಳಾಂತರಿಸಿದಲ್ಲಿ ಮುಂದಿನ ದಿನಗಳಲ್ಲಿ ರಸ್ತೆ ಅಗಲೀಕರಣ ಮಾಡಲು ಸಹಾಯವಾಗುವುದೆಂದು ಸರ್ವಾನು ಮತದಿಂದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮುಂದುವರೆದು, ಸದರಿ ವಿಷಯದ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಸಭೆಯಲ್ಲಿ ಟ್ರಾನ್ಸ್ ಫಾರ್ಮರ್ ಸ್ಥಳಾಂತರಿಸುವ ಬಗ್ಗೆ ತೀರ್ಮಾನವಾಗಿರುವುದರಿಂದ ಸಭೆಯಲ್ಲಿ ಹಾಜರಿದ್ದ ಶ್ರೀ ಆನಂದ್, ಸಹಾಯಕ ಅಭಿಯಂತರರು, ರವರಿಗೆ ಸಭೆಯ ನಿರ್ಣಯವನ್ನು ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ, ತುರ್ತಾಗಿ ಪಶ್ಚಿಮ ಕಾರ್ಡ್ ರಸ್ತೆಯ, ಸರ್ವಿಸ್ ರಸ್ತೆಯಲ್ಲಿ ಬರುವ ನವರಂಗ್ ಬ್ರಿಡ್ಜ್‌ನಿಂದ ಶಿವನಗರ ಸಿಗ್ನಲ್ ವರೆಗೆ ಬರುವ ಎಲ್ಲಾ ಟ್ರಾನ್ಸ್ ಫಾರ್ಮರ್‌ಗಳನ್ನು ಫ್ಲೈಓವರ್ ಕಟ್ಟಡದ ಪಕ್ಕಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

Scanned by CamScanner

4. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಟ್ರಾನ್ಸ್ ಫಾರ್ಮರ್ ಸ್ಥಳಾಂತರಿಸುವ ಕಾಮಗಾರಿಯ ಸಮಯದಲ್ಲಿ ಅಡ್ಡಲಾಗಿ ಬರುವ ಮರದ ಕೊಂಬೆಗಳನ್ನು ತೆರವುಗೊಳಿಸಿ, ಕಾಮಗಾರಿಗೆ ಅನುವು ಮಾಡಿಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

5. ಶ್ರೀ ಆನಂದ್, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಮಂಜುನಾಥನಗರ ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿಗಳು ಹೆಚ್ಚಾಗಿದ್ದು, ಸದರಿ ನಾಯಿಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ವೆಟರ್ನರಿ ಇನ್ಸ್‌ಪೆಕ್ಟರ್ ರವರು ನಾಯಿಗಳನ್ನು ಹಿಡಿಯಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

6. ಶ್ರೀ ಶಿವರಾಮಯ್ಯ, ಎ.ಎಸ್.ಐ. ರಾಜಾಜಿನಗರ ಸಂಚಾರಿ ಪೋಲೀಸ್ ಠಾಣೆ ಇವರು ಕೆಲವು ಕಿಡಿಗೇಡಿಗಳು ಮುಖ್ಯ ರಸ್ತೆಗಳಲ್ಲಿ ವೀಲಿಂಗ್ ಮಾಡುತ್ತಿರುವುದರಿಂದ ಸಾರ್ವಜನಿಕರ ಪ್ರಾಣ ಹಾನಿಯಾಗುವ ಸಂಭವವಿರುವುದರಿಂದ ಅಂತಹವರನ್ನು ರಸ್ತೆಗಳಲ್ಲಿ ಕಂಡಾಗ ಛಾಯ ಚಿತ್ರಗಳನ್ನು ತೆಗೆದು ಪೋಲೀಸ್ ಇಲಾಖೆಗೆ ನೀಡಿದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

7. ಶ್ರೀ ಮಂಜುನಾಥ್, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, 40 ಮತ್ತು 39ನೇ ಕ್ರಾಸ್, ರಾಜಾಜಿನಗರ ಇಲ್ಲಿ ನೀರಿ ಸರಿಯಾಗಿ ಬರದೇ ಇರುವುದರಿಂದ ಇಲ್ಲಿನ ನಾಗರೀಕರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ಶ್ರೀ ನರಸಿಂಹ ಮೂರ್ತಿ , ಕೆಲಸ ಪರಿವೀಕ್ಷಕರು ಮಾತನಾಡುತ್ತಾ ಸದರಿ ರಸ್ತೆಗಳಲ್ಲಿ ನೀರಿನ ಬಿಲ್ಲುಗಳನ್ನು ಪರಿಶೀಲಿಸಲಾಗಿ **30000.00** ಲೀಟರ್ ನಿಂದ **40000.00** ಸಾವಿರ ಲೀಟರ್ ವರೆಗೆ ನೀರು ಸರಬರಾಜು ಆಗಿರುವುದು ಕಂಡು ಬಂದಿರುವುದರಿಂದ ಸದರಿ ಪ್ರದೇಶದಲ್ಲಿ ಯಾವುದೇ ನೀರಿನ ಸಮಸ್ಯೆ ಇರುವುದಿಲ್ಲವೆಂದು ಸಭೆಗೆ ತಿಳಿಸಿದರು.

8. ಶ್ರೀ ಆನಂದ್, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಕಳೆದ 5 ವರ್ಷಗಳಲ್ಲಿ ಯಾವುದೇ ಒಂಟಿ ಮನೆಗಳಿಗೆ ಹಣ ಪಾವತಿಯಾಗಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ವಾರ್ಡಿಗೆ ಸಂಬಂಧಪಟ್ಟ ಒಂಟಿ ಮನೆಯ ಅಂಕಿ ಅಂಶಗಳು ಹಾಗೂ ಅದಕ್ಕೆ ಪಾವತಿಯಾಗಿರುವ ಹಣದ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ನೀಡುವಂತೆ ಕಾಮಗಾರಿ ಇಲಾಖೆಯವರಿಗೆ ತಿಳಿಸಿದರು.

9. ಶ್ರೀ ಉಮೇಶ್, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಹಳೇಯ್ದು ವಿದ್ಯುತ್ ಕಂಬಗಳು ಕೆಲವು ರಸ್ತೆಗಳಲ್ಲಿ ತುಂಬಾ ದಿನಗಳಿಂದ ಬಿದ್ದಿರುವುದರಿಂದ ಸಾರ್ವಜನಿಕರು ಅದರ ಮೇಲೆ ಕಸ ಹಾಗೂ ಡೆಬ್ರಿಸ್ ಹಾಕುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ, ಸಹಾಯಕ ಅಭಿಯಂತರರು, ಬೆಸ್ಕಾಂ, ರವರು ಸದರಿ ಕಂಬಗಳನ್ನು ತೆರವುಗೊಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

10. ಶ್ರೀ ಆನಂದ್, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಮಂಜುನಾಥನಗರ, ಎಲ್.ಐ.ಸಿ. ಕಾಲೋನಿ, 3ನೇ ಮುಖ್ಯರಸ್ತೆ, ಮತ್ತು ಜೆ.ಸಿ. ಬೇಕರಿ ಸುತ್ತಮುತ್ತ ಬೀದಿ ದೀಪಗಳು ಸರಿಯಾಗಿ ಉರಿಯದೆ ಇರುವುದರಿಂದ ರಾತ್ರಿ ಸಮಯದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಹಾಳಾಗಿರುವ ಬೀದಿ ದೀಪಗಳನ್ನು ದುರಸ್ಥಿಪಡಿಸಬೇಕೆಂದು ಸಭೆಯಲ್ಲಿ ಕೋರಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಕಿರಿಯ ಅಭಿಯಂತರರು, ವಿದ್ಯುತ್ ರವರು ದುರಸ್ಥಿಪಡಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

11. ಶ್ರೀ ಅಶೋಕ್‌ರಾವ್, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಮಂಜುನಾಥನಗರದಲ್ಲಿ ದೊಡ್ಡ ಮಳೆ ನೀರು ಚರಂಡಿಯ ಕಾಮಗಾರಿಯು ನಿಧಾನಗತಿಯಲ್ಲಿ ಸಾಗುತ್ತಿದ್ದು, ಅಲ್ಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದರಿಂದ ತುರ್ತಾಗಿ ಕಾಮಗಾರಿಯನ್ನು ನಿರ್ವಹಿಸುವಂತೆ ಸಭೆಯಲ್ಲಿ ಕೋರಿದರು. ಇದಕ್ಕೆ ಉತ್ತರವಾಗಿ ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂಡಿ ರವರು ಕಾಮಗಾರಿಯನ್ನು ಆದಷ್ಟು ಬೇಗನೆ ಮುಗಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 99

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 99

Scanned by CamScanner